ಓಎಸ್ 7/2023

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 04.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ**

ದಾವ ಆಸ್ತಿಗಳು ನನಗೆ ನನ್ನ ತಂದೆಯಿಂದ ಪಿತ್ರಾರ್ಜಿತವಾಗಿ ಬಂದಿರುತ್ತವೆ. ದಾವ ಆಸ್ತಿಗಳು ನನಗೆ 2001 ರಲ್ಲಿ ನೋಂದಾಯಿತ ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ನಿಪಿ 1 ಮತ್ತು 2 ಪಹಣಿಗಳು 2021-2022 ನೇ ಸಾಲಿಗೆ ಸಂಬಧಿಸಿದವು ಎಂದರೆ ಸರಿ. ದಾವ ಐಟಂ ನಂಃ 1ನೇ ಸ್ವತ್ತಿನಲ್ಲಿರುವ ಸರ್ವೇ ನಂಬರ್ 327 ಈಗ ಸರ್ವೇ ನಂಬರ್ 327/1 ಎಂದು ಮತ್ತು ಸರ್ವೇ ನಂಬರ್ 323 ಈಗ ಸರ್ವೇ ನಂಬರ್ 323/1 ಎಂದು ಪೋಡಿಯಾಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿ ನನ್ನ ಅಣ್ಣ ಜನಾರ್ಧನ ರವರ ಹೆಂಡತಿ, 2ನೇ ಪ್ರತಿವಾದಿ ಅವರ ಮಗಳು ಮತ್ತು 3ನೇ ಪ್ರತಿವಾದಿ ಅವರ ಅಳಿಯನಾಗಿರುತ್ತಾರೆ. ಸರ್ವೇ ನಂಬರ್ 323/2 ರಲ್ಲಿ 3 ಎಕರೆ 2 ಗುಂಟೆ ಮತ್ತು ಸರ್ವೇ ನಂಬರ್ 327/2 ರಲ್ಲಿ 2 ಎಕರೆ 34 ಗುಂಟೆ 1 ಮತ್ತು 2ನೇ ಪ್ರತಿವಾದಿಗಳ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ ಸ್ವತ್ತಿನ ಸಂಖ್ಯೆ 662ಎ, 663ಎ, 664ಎ, 665ಎ, ಮನೆಗಳು ಮತ್ತು ಖಾಲಿ ನಿವೇಶನಗಳು 1 ಮತ್ತು 2ನೇ ಪ್ರತಿವಾದಿಗಳ ಹಿಸ್ಸೆಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ಹೌದು ಆದರೆ ಅವರು ಬಿಟ್ಟಿದ್ದ ದಾರಿಯನ್ನು ಮುಚ್ಚಿ ಗೋಡೆ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಆ ರೀತಿ ಗೋಡೆ ಕಟ್ಟಿಕೊಂಡಿದ್ದಾರೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯಾದ ನಾನು 6.5 ಅಡಿ ಅಗಲದ ದಾರಿಯನ್ನು ಮುಚ್ಚಿ ಗೋಡೆ ಕಟ್ಟಿಕೊಂಡಿದ್ದೇನೆ ಎಂದು ತಿಳಿಸಿರುವ ಕಾರಣದಿಂದ ನಾನು ಪ್ರತಿವಾದಿಗಳು ಆ ರೀತಿ ಗೋಡೆ ಕಟ್ಟಿಕೊಂಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓಎಸ್ 7/2023

ಪಿಡಬ್ಲ್ಯೂ 1

2. ಸಾಕ್ಷಿಗೆ ಒಂದು ಫೋಟೋ ತೋರಿಸಿ ಈ ಫೋಟೋದಲ್ಲಿ ಕಾಣುವ ಮನೆಯ ಗೇಟ್ ನ್ನು ಯಾರು ಹಾಕಿಸಿರುವುದು ಎಂದು ಕೇಳಲಾಗಿ ಸಾಕ್ಷಿಯು ನೋಡಿ ನಾನೇ ಹಾಕಿಸಿಕೊಂಡಿರುವುದು ಎಂದು ಒಪ್ಪಿಕೊಂಡಿದ್ದರಿಂದ ಸದರಿ ಫೋಟೋವನ್ನು ನಿಡಿ 1 ಎಂದು ಗುರ್ತಿಸಲಾಯಿತು. ನಿಡಿ 1 ಫೋಟೋದಲ್ಲಿ ಕಾಣುವ ಕಬ್ಬಿಣದ ಗೇಟ್ ನಿಂದ ಎರಡೂ ಬದಿಯಲ್ಲಿರುವ ಆಸ್ತಿ ನನಗೆ ಸೇರಿದ್ದು ಎಂದರೆ ಸರಿ. ನಿಡಿ 1 ಫೋಟೋ ದಲ್ಲಿ ಕಾಣುವ ಆಸ್ತಿಯ ದಕ್ಷಿಣ ದಿಕ್ಕಿಗೆ 1 ಮತ್ತು 2ನೇ ಪ್ರತಿವಾದಿಗಳಿಗೆ ಸೇರಿದ ಮನೆ ಇದೆ ಎಂದರೆ ಸರಿ. ನಿಡಿ 1 ಫೋಟೋ ದಲ್ಲಿ ಕಾಣುವ ನಮ್ಮ ಆಸ್ತಿಯ ಉತ್ತರದ ಕಡೆಗೆ ಇರುವ ಆಸ್ತಿಯ ಪಶ್ಚಿಮಕ್ಕೆ 6 ½ ಗಲ್ಲಿ ಇದ್ದು ಅದರ ನಂತರ 1 ಮತ್ತು 2ನೇ ಪ್ರತಿವಾದಿಗಳಿಗೆ ಸೇರಿದ ನಿವೇಶನ ಇದೆ ಎಂದರೆ ಸರಿ. ನಿಡಿ 1 ಫೋಟೋ ದಲ್ಲಿ ಕಾಣುವ ನಮ್ಮ ಆಸ್ತಿಯ ಉತ್ತರದ ಕಡೆಗೆ 1 ಮತ್ತು 2ನೇ ಪ್ರತಿವಾದಿಗಳಿಗೆ ಸೇರಿದ ಮನೆ ಇದೆ ಎಂದರೆ ಸರಿ. ಮೇಲೆ ಹೇಳಿದ ಪ್ರತಿವಾದಿಗಳ ಮೂರು ಆಸ್ತಿಗಳಿಗೂ ಸಹ ನಿಡಿ 1 ಫೋಟೋ ದಲ್ಲಿ ಕಾಣುವ ಕಬ್ಬಿಣದ ಗೇಟ್ ಮೂಲಕ ಹಾದಿಹೋಗಬೇಕು ಎಂದರೆ ಸರಿಯಲ್ಲ.

3. ದಿಃ 03.01.2011ರ ವಿಭಾಗ ಪತ್ರದಲ್ಲಿ ಪ್ರತಿವಾದಿಗಳಿಗೆ ಸೇರಿದ ಆಸ್ತಿಗೆ ತಿರುಗಾಡುವ ಸಲುವಾಗಿ 6 ½ ಅಡಿ ಗಲ್ಲಿ ಇದೆ ಎಂದು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ಈ ವರೆಗೂ ಎಲ್ಲೂ ಪ್ರಶ್ನಿಸಿಲ್ಲ ಎಂದರೆ ಸರಿ. 1ನೇ ಪ್ರತಿವಾದಿ ಈಗ ಎಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ಜನಾರ್ಧನ ಮೃತ ಪಟ್ಟ ನಂತರ ಅವರ ಕುಟುಂಬದವರು ಎಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಮನೆಗಳಲ್ಲಾದರು ಪ್ರತಿವಾದಿಗಳು ವಾಸ ಇದ್ದಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಭಾಗವಾದ ನಂತರ ದಾವ ಐಟಂ ನಂಃ 1ನೇ ಆಸ್ತಿಯನ್ನು ಅಳತೆ ಮಾಡಿಸಿ ಹದ್ದುಬಸ್ತ್ ಮಾಡಿಸಿರುವುದಿಲ್ಲ. ವಿಭಾಗ ಮಾಡುವಾಗ ಆಸ್ತಿಯು ಪ್ರತ್ಯೇಕವಾಗಿ ಫೋಡ್ ಆಗಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಮಾಡುವಾಗಲೇ ಫೋಡ್ ಆಗಿತ್ತು ಮತ್ತು ದಾವ ದಾಖಲಿಸುವ ಸಮಯಕ್ಕೆ ಆಸ್ತಿ ಫೋಡ್ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಓಎಸ್ 7/2023

ಪಿಡಬ್ಲ್ಯೂ 1

4. ಪ್ರತಿವಾದಿಗಳು ಅವರ ಆಸ್ತಿಯನ್ನು ಅಳತೆ ಮಾಡಿಸಲು ಭೂ ಮಾಪನ ಇಲಾಖೆಗೆ ಅರ್ಜಿಸಲ್ಲಿಸಿದ್ದು ನನಗೆ ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಹಿಸ್ಸೆಗೆ ಬಂದಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನೇ ತೊಂದರೆ ಕೊಟ್ಟಿದ್ದು ಅದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ಬಾಕಿ ಇದೆ ಎಂದರೆ ಸಾಕ್ಷಿಯು ನಾನು ತೊಂದರೆ ಕೊಟ್ಟಿಲ್ಲ ಆದರೆ ಪ್ರಕರಣ ದಾಖಲಾಗಿದ್ದು ಬಾಕಿ ಇದೆ ಎಂದು ನುಡಿಯುತ್ತಾರೆ. ದಾವ ಐಟಂ ನಂಃ 2ನೇ ಆಸ್ತಿಗೂ ಸಹ ನಾನು ಗೇಟ್ ನ್ನು ಅಳವಡಿಸಿ 6 ½ ಗಲ್ಲಿಯನ್ನು ಪ್ರತಿವಾದಿಗಳು ಉಪಯೋಗಿಸಲು ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ತೊಂದರೆ ಕೊಟ್ಟ ಕಾರಣ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದರಿಂದ ಅದರಿಂದ ಬಚಾವ್ ಆಗಲು ಪ್ರತಿವಾದಿಗಳ ವಿರುದ್ಧ ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ಕಾಣುವ ಕಬ್ಬಿಣದ ಗೇಟ್ ನ್ನು ಮುಚ್ಚಿ ಬೀಗ ಹಾಕಿಕೊಂಡು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ